ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ. ಇಡಿ/ಕೆಇಎ/ನರ್ಸಿಂಗ್/2022 ದಿನಾಂಕ. 13.01.2023

# ಸುತ್ತೋಲೆ

## 2022ನೇ ಸಾಲಿನ ಪಿಬಿ.ಬಿಎಸ್‌ಸಿ, ಬಿಪಿಟಿ –ಲ್ಯಾಟರಲ್ ಎಂಟ್ರಿ ಮತ್ತು ಬಿ.ಎಸ್‌ಸಿ ಅಲೈಡ್ ಹೆಲ್ತ್ ಸೈನ್ಸ್ – ಲ್ಯಾಟರಲ್ ಎಂಟ್ರಿ, ಕೋರ್ಸುಗಳಿಗೆ ಮಾಪ್ ಅಪ್ ಸುತ್ತು

2022ನೇ ಸಾಲಿನ ಪಿಬಿ.ಬಿಎಸ್‌ಸಿ, ಬಿಪಿಟಿ –ಲ್ಯಾಟರಲ್ ಎಂಟ್ರಿ ಮತ್ತು ಬಿ.ಎಸ್‌ಸಿ ಅಲೈಡ್ ಹೆಲ್ತ್ ಸೈನ್ಸ್ – ಲ್ಯಾಟರಲ್ ಎಂಟ್ರಿ, ಕೋರ್ಸುಗಳಿಗೆ_ಪ್ರಾಧಿಕಾರದ ವತಿಯಿಂದ ಒಂದು ಸುತ್ತಿನ ಸೀಟು ಹಂಚಿಕೆಯನ್ನು ಪೂರ್ಣಗೊಳಿಸಲಾಗಿರುತ್ತದೆ. ತದ ನಂತರ ಸರ್ಕಾರಿ ಕಾಲೇಜುಗಳಲ್ಲಿ ಉಳಿಕೆ ಸೀಟುಗಳಿಗೆ ಮಾಪ್ ಅಪ್ ಸುತ್ತಿನ ಸೀಟು ಆಯ್ಕೆ ಪ್ರಕ್ರಿಯೆಯನ್ನು ದಿನಾಂಕ. 16.01.2023ರಂದು ಆಯಾ ಜಿಲ್ಲೆಯ ಸರ್ಕಾರಿ ವೈದ್ಯಕೀಯ / ನರ್ಸಿಂಗ್ ಕಾಲೇಜುಗಳಲ್ಲಿ ನಡೆಸಲಾಗುವುದು.

ಯಾವುದೇ ಸೀಟು ಹಂಚಿಕೆಯಾಗದಿರುವ ಹಾಗೂ ಹಂಚಿಕೆ ಪಡೆದು ಕಾಲೇಜಿಗೆ ಪ್ರವೇಶ ಪಡೆಯದಿರುವ ಅಭ್ಯರ್ಥಿಗಳು ಮಾಪ್ ಅಪ್ ಸುತ್ತಿನಲ್ಲಿ ಭಾಗವಹಿಸಬಹುದು. ಅಭ್ಯರ್ಥಿಗಳು ದಿನಾಂಕ 16.01.2023ರಂದು ಬೆಳಿಗ್ಗೆ 9.00 ಗಂಟೆಗೆ ಸಿಇಟಿ ಅರ್ಜಿ ಮತ್ತು ಅಗತ್ಯ ಮೂಲ ದಾಖಲೆಗಳೊಂದಿಗೆ ಆಯಾ ಜಿಲ್ಲೆಯ ಸರ್ಕಾರಿ ವೈದ್ಯಕೀಯ / ನರ್ಸಿಂಗ್ ಕಾಲೇಜುಗಳಲ್ಲಿ ಹಾಜರಿದ್ದು ಪ್ರಾಂಶುಪಾಲರನ್ನು ಸಂಪರ್ಕಿಸುವುದು.

ಸದರಿ ಕೋರ್ಸುಗಳ ಪ್ರವೇಶಕ್ಕಾಗಿ ದಾಖಲಾತಿ ಪರಿಶೀಲನೆಗೆ ಹಾಜರಾಗದೇ ಇರುವ ಅಭ್ಯರ್ಥಿಗಳು ದಾಖಲೆ ಪರಿಶೀಲನೆಯನ್ನು ಆಯಾ ಜಿಲ್ಲೆಯ ಸರ್ಕಾರಿ ವೈದ್ಯಕೀಯ / ನರ್ಸಿಂಗ್ ಕಾಲೇಜುಗಳಲ್ಲಿ ಬೆಳಿಗ್ಗೆ 9.00 ಗಂಟೆಗೆ ಹಾಜರಾಗಿ ದಾಖಲಾತಿ ಪರಿಶೀಲನೆ ಪೂರ್ಣಗೊಳಿಸಿ ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.

ಸೀಟು ಆಯ್ಕೆ ಪ್ರಕ್ರಿಯೆಯು ದಿನಾಂಕ. 16.01.2023 ರಂದು ಮಧ್ಯಾಹ್ನ 3.00ಗಂಟೆಗೆ ನಡೆಸಲಾಗುವುದು.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in